

ಶೆಡ್‌ನಲ್ಲಿ ಕಾರು ನಿಲ್ಲಿಸಿ, ಪಕ್ಕದ ಸೀಟಿನ ಮೇಲಿದ್ದ ವ್ಯಾನಿಟಿಯನ್ನು ಭುಜಕ್ಕೆ ನೇಲಿಸಿಕೊಂಡು, ಕಾರಿಳಿದು ಲಾಕ್ ಮಾಡಿದಳು ಶ್ರಾವಂತಿ. ಮನೆಬಾಗಿಲಲ್ಲೇ ಎದುರ್ಗೊಂಡ ನಕುಲನ ಮುಖದಲ್ಲಿ ಸಂಭ್ರಮದ ನಗು.

"ಓ, ಏನಿವತ್ತು ನಂಗಿಂತಾ ಮೊದಲೇ ಸವಾರಿ ಬಂದ್ಬಿಟ್ಟಿದೆ?" ಶ್ರಾವಂತಿ ವರಾಂಡದ ಮೂಲೆಯಲ್ಲಿ ಚಪ್ಪಲಿ ಕಳಚಿ ಮನೆಯೊಳಗೆ ಉಪಯೋಗಿಸುವ ಚಪ್ಪಲಿಯಲ್ಲಿ ಕಾಲು ತೂರಿಸುತ್ತಾ ಹುಬ್ಬೇರಿಸಿ ಪ್ರಶ್ನಿಸಿದಳು. ಅವಳ ಪ್ರಶ್ನೆಗೆ ಉತ್ತರಿಸುವ ಬದಲು ನಕುಲ ತಲುಪಿಸಿದ ಸುದ್ದಿಯೇ ಬೇರೆ,

"ನಾಳೆ ಕೇತಕಿ ಬರ್ತಾಳಂತೆ, ಫೋನ್ ಮಾಡಿದ್ಲು..."

"ಓ..." ಎನ್ನುವ ರಾಗದಲ್ಲಿ ಕೊಂಚ ಅಸಹನೆ, ಕೊಂಚ ನೆಮ್ಮದಿ ಮತ್ತು ಕೊಂಚ ತಳಮಳ. ಯಾವ ಭಾವನೆಯೂ ತನ್ನ ತುಟಿ ಮೀರಿ ಹೊರ ಬಾರದಂತೆ ಸೀದಾ ಒಳಗೆ ನಡೆದಳು